ಅದೇನೋ
ಆಕೆಯ ದನಿಗಿಂತ ಜೋರಾಗಿ
ಕುಸುಬೆಗಲ್ಲೆಯಂಥ ಆ ಒಣಕಲು ಹೊಟ್ಟೆಯ
ನಿಡಿದುಸಿರೊಂದು
ಹೂಂಸಾಗಿ ಕಿತ್ತು ಬಂತು...
ಪಾತರಗಿತ್ತಿ ಮುಳ್ಳು ಮೆಟ್ಟಿದವಳಂತೆ
ತಂತಾನೆ ಮಿಟ್ಟಿಬಿದ್ದು ನಿಧಾನ ಸರಿಯುತ್ತಾ
ಎಲ್ಲ ಕಣ್ಣುಬಾಣ ತಪ್ಪಿಸಿಕೊಳ್ಳಲು ಸಾಗಿ ಹೋದಳು
ಹಸಿದ ಹೊಟ್ಟೆಯ ನಾದವ ಇಡೀ ನಿಲ್ದಾಣವೇ
ನಿಂತು ಕೇಳಿತು

ನಾನೂ ಎದ್ದು ಹೋದೆ...
ಚಿಲ್ಲರೆ ತರಲು
ಪ್ಲಾಟ್‌ಫಾರ್ಮಿನ ಎಲ್ಲ ಅಂಗಡಿಗಳ ತಡಕಿದೆ
ಚಿಲ್ಲರೆ ಸಿಗಲಿಲ್ಲ

ಹೋದರೆ ಹೋಗಲಿ
ಮುರಿಯದ ನೋಟನ್ನೇ ಕೊಡಲು ಆಕೆಗಾಗಿ ಹುಡುಕಿದೆ
ಹಿಂಗಣ ಮುಂಗಣ ಮೂರುಸಲ
ಆ ರೈಲು ಪಟ್ರಿಗಳ ಗುಂಟ ಓಡಾಡಿದೆ
ಆ ನಿಲ್ದಾಣದಲ್ಲಿ ಆಕೆ ಕಾಣಲೇ ಇಲ್ಲ

ಮಡಚಿ ಜೇಬಿಗಿಟ್ಟ ನೋಟು
ಕೆಂಡದ ಚೂರಿನಂತೆ ಅನಿಸಹತ್ತಿತು
ನಿಲ್ದಾಣದ ಎಲ್ಲ ಕಣ್ಣು ನನ್ನನೇ ನೋಡುತಿವೆ
ನಾನು ಜೇಬುಗಳ್ಳನೋ ಎಂಬಂತೆ
ನಾನೂ ಅಲ್ಲಿಂದ ಹೊರಟು ಬಂದೆ





# ಯಾರೂ ಇಲ್ಲದಲ್ಲಿ

ಇಲ್ಲಿ ಯಾರೂ ಇಲ್ಲ
ಕೂಗಿಕೊಂಡರೂ ಅರ್ಥವಿಲ್ಲ
ಮೌನವಾಗಿದ್ದರೂ ಕೂಡಾ...

ಯಾರಾದರೂ ಇದ್ದಿದ್ದರೆ ಮಾತ್ರ
ಮಾತು
ಮೌನಗಳಿಗೆ ಸಿಂಗಾರ

ಖಾಲಿ ಹೃದಯದೊಳಗೆ
ನನ್ನದೇ ಬಿಕ್ಕುಗಳು
ಉಮ್ಮುಮ್ಮಳಿಸಿ ಬರುತಿವೆ
ಸುಮ್ಮನಿರು ಅಳುಬುರುಕ ಎನುತ